# ಪ್ರಚಾರ ಲೋಲುಪ್ತಿ...

ಮನುಷ್ಯನಲ್ಲಿರುವ ಅನೇಕ ದೌರ್ಬಲ್ಯಗಳಲ್ಲಿ ಪ್ರಚಾರ ಪಡೆಯಬೇಕೆನ್ನುವ ಪ್ರವೃತ್ತಿಯೂ ಒಂದು. ತನ್ನ ಹೆಸರು ಅನೇಕರಿಗೆ ತಿಳಿದಿರಬೇಕು, ತನ್ನ ಪರಿಚಯ ಹಲವರಿಗೆ ಇರಬೇಕು, ತಾನು ಮಾಡಿರುವ ಹಾಗೂ ಮಾಡಬೇಕೆಂದಿರುವ 'ಘನ ಕಾರ್ಯ'ಗಳೆಲ್ಲವೂ ಜಗಜ್ಜಾಹೀರಾಗಬೇಕು– ಇಂಥ 'ಬೇಕು'ಗಳ ಒತ್ತಡಕ್ಕೆ ಒಳಗಾದ ಮನುಷ್ಯ ಪ್ರಚಾರದ ಮೋಹಕ್ಕೆ ತನ್ನನ್ನು ಒಪ್ಪಿಸಿಕೊಳ್ಳುತ್ತಾನೆ. ಇದು ಕೇವಲ ಆಧುನಿಕ ಕಾಲಕ್ಕಷ್ಟೇ ಸೀಮಿತವಲ್ಲ. ಇಡಿಯ ಭೂಮಂಡಲವನ್ನು ಜಯಿಸಿದ ಭರತ ಚಕ್ರವರ್ತಿಯಂಥವರಿಗೂ ಈ ರೋಗ ಇದ್ದದ್ದೇ. ತನ್ನ ಹೆಸರು ಆ ಚಂದ್ರಾರ್ಕವಾಗಿ ಉಳಿದು, ಜನ ತನ್ನ ವಿಜಯ ಸಾಧನೆಯನ್ನು ನೆನಪಿಸಿಕೊಳ್ಳಬೇಕೆಂಬ ಉದ್ದೇಶದಿಂದ ಭರತ ವೃಷಭಾಚಲದಲ್ಲಿ– ತನ್ನ ಪ್ರಶಸ್ತಿಯನ್ನು ಬರೆಸಲು ಸ್ಥಳವಿಲ್ಲದೇ ಇದ್ದರೂ, ಬೇರೊಬ್ಬರ ಪ್ರಶಸ್ತಿಯನ್ನು 'ಸೀಂಟಿ ಕಳೆದು'– ತನ್ನ ಪ್ರಶಸ್ತಿಯನ್ನು ಕೆತ್ತಿಸಿದನಂತೆ. ಇದು ಪ್ರಚಾರ ಲೋಲುಪ್ತಿಗೆ ಒಂದು ಒಳ್ಳೆಯ ಉದಾಹರಣೆ.

ಪ್ರಚಾರವನ್ನು ಬಯಸುವ ಮನುಷ್ಯ ಪ್ರಚಾರಕ್ಕಾಗಿಯೇ ಕೆಲಸ ಮಾಡುತ್ತಾನೆ ಎಂಬುದು ಈ ದಿನಗಳಲ್ಲಂತೂ ಸತ್ಯ. ಬಹು ಮಾಧ್ಯಮಗಳು ವಿಜೃಂಭಿಸುತ್ತಿರುವ ಈ ಕಾಲದಲ್ಲಿ ಪ್ರಚಾರ ಪ್ರಿಯರು ಅವಕಾಶ ಸಿಕ್ಕಾಗಲೆಲ್ಲಾ ತಮ್ಮನ್ನು ಮಾಧ್ಯಮಗಳೆದುರು ಒಡ್ಡಿಕೊಳ್ಳಲು ಕಾತುರರಾಗಿರುತ್ತಾರೆ. ಇಂಥ ಮಂದಿಯನ್ನು ಕುವೆಂಪುರವರು 'ಪ್ರಯೋಜನ' ಎಂಬ ಕವಿತೆಯಲ್ಲಿ ಮಾರ್ಮಿಕವಾಗಿ ಗೇಲಿ ಮಾಡಿದ್ದಾರೆ. ನೀರು ತುಂಬಿದ ಒಂದು ಬಿಂದಿಗೆ ಸಹರಾ ಮರುಭೂಮಿಯನ್ನು ಫಲವತ್ತಾಗಿ ಮಾಡುವ ಉದ್ದೇಶದಿಂದ ಹೊರಟಿತ್ತಂತೆ. ಅದನ್ನು ಗಮನಿಸಿದ ಒಂದು ಪುಟ್ಟ ತಂಬಿಗೆ– 'ಅಗಾಧವಾದ ಸಹರಾವನ್ನು ಫಲವತ್ತಾಗಿ ಮಾಡುವುದು ಅಸಾಧ್ಯ. ಆ ವ್ಯರ್ಥ ಸಾಹಸಕ್ಕೆ ಬದಲಾಗಿ ಚಿಕ್ಕ ತೋಟದಲ್ಲಿನ ಗಿಡಗಳಿಗೆ ನೀರೆರೆದರೆ ಶ್ರಮ ಸಾರ್ಥಕವಾಗುತ್ತದಲ್ಲವೇ?' ಎನ್ನುತ್ತದೆ. ಅದಕ್ಕೆ ಬಿಂದಿಗೆಯ ಪ್ರತಿಕ್ರಿಯೆಯನ್ನು ಕುವೆಂಪುರವರ ಮಾತುಗಳಲ್ಲಿಯೇ ಕೇಳೋಣ: 'ಬೆಪ್ಪ, ಈ ಕೊಂಪೆಯಲಿ ನನ್ನ ಸಾಹಸವ ನೋಡುವವರಾರು? ....ಇಲ್ಲಿರುವ ನಿನ್ನ ಪತ್ರಿಕೆಯೇ ಮೂರು ಕಾಸಿನದು...! ಅದಕ್ಕಿರುವುದೊಂದೇ ಹಾಳೆ...! ಸಹರಾಕ್ಕೆ ನೀರೆರೆಯಲು ನಾ ಹೊರಟರೆ ಸುದ್ದಿ ಹಬ್ಬುವುದು ದೇಶ ದೇಶದಲಿ... ಬೇರೆ ಬೇರೆ ಭಾಷೆಯ ಮಹಾ ಪತ್ರಿಕೆಗಳ ಪುಟ ಪುಟಗಳನು ತುಂಬುವುವು ನನ್ನ ಚಿತ್ರಗಳೇ!...' ಇಷ್ಟಾದರೂ ತಂಬಿಗೆ– 'ಅದರಿಂದೇನು ಪ್ರಯೋಜನ? ಎರಡು ಕೊಡ ನೀರಲ್ಲಿ ಸಹರಾ ಫಲವತ್ತಾದೀತೆ?' ಎಂದು ಕೇಳುತ್ತದೆ, ಅದಕ್ಕೆ ಬಿಂದಿಗೆ– "ಅದು ಫಲವತ್ತಾದರೆಷ್ಟು? ಆಗದಿದ್ದರೆಷ್ಟು? ನನ್ನ ಹೆಸರಾಗುವುದು ಲೋಕ ಪ್ರಸಿದ್ಧ! ಅದಕ್ಕಿಂತಲೂ ಯಾವುದಯ್ಯ– 'ಪ್ರಯೋಜನ'?" ಎಂದು ಉತ್ತರಿಸುತ್ತದೆ.

ಉನ್ನತ ಉದ್ದೇಶವನ್ನಿರಿಸಿಕೊಂಡು, ಆ ದಿಕ್ಕಿನಲ್ಲಿ ನಡೆಯುವ ನಿಜವಾದ ಸಾಧಕ ಯಾವಾಗಲೂ ಪ್ರಚಾರ ವಿಮುಖನಾಗಿರುತ್ತಾನೆ; ಮಾತ್ರವಲ್ಲ, ಮಾಧ್ಯಮಗಳೇ ಸ್ವತಃ ಆತನನ್ನು ಹುಡುಕಿಕೊಂಡು ಬಂದರೂ ಅದರಿಂದ ತನ್ನ ಸಾಧನೆಗೆ ಅಡ್ಡಿಯಾಗುವುದೆಂಬ ಭಯದಿಂದ, ಅವುಗಳನ್ನು ದೂರವಿರಿಸಲು ಹೆಣಗಾಡುತ್ತಾನೆ. ಜಗತ್ತಿನಲ್ಲಿ ಘಟಿಸುವ ಅನೇಕ ಮಹತ್ಕಾರ್ಯಗಳ ಹಿಂದಿರುವ ವ್ಯಕ್ತಿಗಳು ಅನಾಮಧೇಯರಾಗಿಯೇ ಉಳಿಯ ಬಯಸುತ್ತಾರೆ. ಆದರೆ ಪ್ರಸಿದ್ಧಿಗಾಗಿ ಹಾತೊರೆಯುವವರ ಸಂಖ್ಯೆಯ ಎದುರು ಇಂಥವರು ತೀರಾ ಅಲ್ಪ ಸಂಖ್ಯಾತರು. ಪ್ರಚಾರ ಲೋಲುಪರನ್ನು ಕುರಿತ ಒಂದು ಶ್ಲೋಕ ಇಂದಿಗೂ ಪ್ರಸ್ತುತ. ಅದು ಹೀಗಿದೆ:

ಘಟಂ ಭಿಂದ್ಯಾತ್, ಪಟಂ ಛಿಂದ್ಯಾತ್, ಕುರ್ಯಾತ್ ರಾಸಭರೋಹಣಮ್।
ಯೇನ ಕೇನ ಪ್ರಕಾರೇಣ, ಪ್ರಸಿದ್ಧಃ ಪುರುಷೋ ಭವೇತ್॥

(ಮಡಕೆಯನ್ನು ಒಡೆದೋ, ತಡಿಕೆ ಹರಿದೋ, ಕತ್ತೆಯನ್ನೇರಿಯೋ, ಹೇಗಾದರೂ ಸರಿ, ಪ್ರಸಿದ್ಧನಾಗು)

■ ವೈನತೇಯ

## ಮಾತೇ ಮುತ್ತು

★ ಅನುಮಾನಕ್ಕೆ ಮುಖ್ಯ ಕಾರಣ– ಅಲ್ಪಜ್ಞಾನ.
–ಫ್ರಾನ್ಸಿಸ್ ಬೇಕನ್

★ ಅಪಮಾನ ಸಹಿಸುವುದು ಕಷ್ಟವಲ್ಲ; ಆದರೆ ಅದನ್ನು ಸಹಿಸಿಕೊಳ್ಳುವುದು ಅನ್ಯಾಯ.
–ರವೀಂದ್ರನಾಥ ಠಾಕೂರ್

★ ಸಾಮಾನ್ಯ ಜನರು ಅಪರಾಧ ಮಾಡದೆ ಇರುವುದು ಅದು ತರುವ ಶಿಕ್ಷೆಯ ಭಯದಿಂದಲೇ ಹೊರತು– ಅದು ಕೆಟ್ಟದ್ದೆಂದಲ್ಲ.
–ಅರಿಸ್ಟಾಟಲ್

★ ಅಪ್ಪಣೆ ಪಾಲಿಸಬಲ್ಲವನೇ ಅಪ್ಪಣೆ ಮಾಡಬಲ್ಲವನು.
–ಥಾಮಸ್ ಕೆಂಪಿಸ್

★ ಹೊಸ ಅಭಿಪ್ರಾಯಗಳನ್ನು ಜನರು ಸಾಮಾನ್ಯವಾಗಿ ಅನುಮಾನದಿಂದ ನೋಡುತ್ತಾರೆ, ವಿರೋಧಿಸುತ್ತಾರೆ. ಏಕೆಂದರೆ ಅವು ಸಾಕಷ್ಟು ಪರಿಚಿತವಾಗಿರುವುದಿಲ್ಲ.
–ಜಾನ್ ಲಾಕ್

★ ಆಚಾರವಂತರು ಎಲ್ಲ ಕಡೆಯಲ್ಲಿ ಸಿಕ್ಕರು; ವಿಚಾರವಂತರು ಎಲ್ಲೂ ಸಿಗಲಿಲ್ಲ.
–ಕಬೀರ

★ ಅಭಿಪ್ರಾಯ ಬೇಧವೆಂದರೆ ಎಂದೂ ದ್ವೇಷವೆಂದಲ್ಲ; ಭಿನ್ನಾಭಿಪ್ರಾಯ ಇಲ್ಲದ ಇಬ್ಬರನ್ನು ನಾನು ಪ್ರಪಂಚದಲ್ಲಿ ನೋಡಿಲ್ಲ.
–ಮಹಾತ್ಮ ಗಾಂಧೀಜಿ

★ ಎಂಥ ಮೇಧಾವಿಗಳೇ ಆಗಲಿ, ಅವರದು 'ಅಭಿಪ್ರಾಯ' ಆಗಬಹುದೇ ಹೊರತು 'ಪ್ರಮಾಣ' ಆಗಲಾರದು.
–ಎ.ಎನ್.ಮೂರ್ತಿರಾವ್

★ ವ್ಯಕ್ತಿಪೂಜೆ, ಶುದ್ಧೀಕರಣ ಮತ್ತು ಕರ್ತವ್ಯದ ಬಗೆಗೆ ಉದಾಸೀನತೆ– ಇಂತಹ ವಿಚಾರಗಳು ಹಿಂದೂ ಧರ್ಮವನ್ನು ನಾಶ ಮಾಡಿವೆ ಮತ್ತು ಸಮಾಜದ ಅವನತಿಗೆ ಕಾರಣೀಭೂತವಾಗಿವೆ.
–ಬಿ.ಆರ್.ಅಂಬೇಡ್ಕರ್

★ ಕಾಲ ನಿನಗೆ ಅನುಕೂಲ ಆಗದಿದ್ದಲ್ಲಿ ನೀನೇ ಕಾಲಕ್ಕೆ ಹೊಂದಿಕೋ.
–ಪರ್ಷಿಯನ್ ಗಾದೆ

★ 'ಇನ್ನೂ ಅಷ್ಟು ಬೆಳೆದೇನು' ಎಂದು ಹೇಳಲಾರದಷ್ಟು ಎತ್ತರ ಬೆಳೆದವರು ಯಾರೂ ಇಲ್ಲ; ನಾನು ಬಗ್ಗಬೇಕಾಗಿಯೇ ಇಲ್ಲ ಎನ್ನುವಷ್ಟು ಯಾರೂ ಸಣ್ಣವರಲ್ಲ.
–ಡೇನಿಷ್ ಗಾದೆ

★ ನೆರೆಯವನನ್ನು ಪ್ರೀತಿಸು; ಆದರೆ ನಿನ್ನ ಮನೆಗೆ ಬೇಲಿ ಹಾಕಿಕೋ.
–ರಷ್ಯನ್ ಗಾದೆ

★ ಬೆಕ್ಕನ್ನು ನೋಡಿ ಇಲ್ಲಿ ನಗುತ್ತಿದ್ದರೆ ಹತ್ತಿರದಲ್ಲಿ ಬಿಲ ಇದ್ದೇ ಇರುತ್ತದೆ.
–ನೈಜೀರಿಯಾ ಗಾದೆ

★ ದ್ವೇಷಿಸಬಹುದೇನೋ ಎಂದು ಪ್ರೀತಿಸು, ಪ್ರೀತಿಸಬಹುದೇನೋ ಎಂದು ದ್ವೇಷಿಸು.
–ಲ್ಯಾಟಿನ್ ಗಾದೆ

★ ಎಲ್ಲಿ ಆದರ್ಶ ಇದೆಯೋ ಅಲ್ಲಿ ಶಬ್ದಗಳಲ್ಲ, ಕೃತಿ ಇರಬೇಕು. ಕೃತಿ ಇಲ್ಲದ ಶಬ್ದಗಳು ಆದರ್ಶವನ್ನು ಕೊಲೆ ಮಾಡುತ್ತವೆ.
–ಪಾಟೀಲ ಪುಟ್ಟಪ್ಪ

★ ಅಸ್ಪೃಶ್ಯತೆ ಎಂಬುದು ಅಸ್ಪೃಶ್ಯರಿಗೆ ಅಂಟಿಕೊಂಡಿರುವ ಜಾಡ್ಯವಲ್ಲ; ಸ್ಪೃಶ್ಯರಿಗೆ ಹಿಡಿದಿರುವ ಜಾಡ್ಯ.
–ರಾಜಾಜಿ

★ ಅಹಂಕಾರ ಮುಂದೆ ಇದ್ದರೆ, ದುರದೃಷ್ಟ ಹಿಂದೆ ಇದ್ದೇ ಇರುತ್ತದೆ.
–ಫ್ರೆಂಚ್ ಗಾದೆ